ಶ್ರೀ ವೀರಣ್ಣ.—ಈಗ ಪರಿಶೀಲನೆಯಲ್ಲೇನು ಇಲ್ಲ. ನಿಮ್ಮ ಉಪ ಪ್ರಶ್ನೆಗೆ ಹೇಳಿದೆ, ಸಾಧ್ಯವಾದಷ್ಟು ಬೇಗ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯುತ್ತಾ ಬಂತು. ಇನ್ನೂ ಐದಾರು ಪ್ರಶ್ನೆಗಳಿವೆ. ದಯವಿಟ್ಟು ಮಾನ್ಯ ಸದಸ್ಯರು ಸಹಕಾರ ಕೊಡಬೇಕು. ಪ್ರಶ್ನೆ ಹಾಕಿದ ಸದಸ್ಯರು ಮಾತ್ರ ಒಂದೆರಡು ಉಪ ಪ್ರಶ್ನೆಗಳನ್ನು ಕೇಳಿ.

ಪ್ರವಾಹ ವಿಮೋಚನಾ ಬದಲೀ ರಸ್ತೆಯಂ ನಿರ್ಮಾಣ ಕುರಿತಂ.

೪೪೧. ಶ್ರೀಮತಿ ಮನೋರಮಾ ಮಧ್ವಾರಾಜ್ (ಉಡುಪಿ).— ಈ ಕೆಳಕಂಡ ಪ್ರಶ್ನೆಗಳಿಗೆ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಅತಿ ಹೆಚ್ಚಿನ ಪ್ರವಾಹದ ಸಮಯದಲ್ಲಿ ಉಡುಪಿ ತಾಲ್ಲೂಕಿನ ಮಲ್ಪೆ ಉಡುಪಿ–ಕಾರ್ಕಳ ರಸ್ತೆ ಹಾಗೂ ಕಾರ್ಕಳ–ಪಲ್ಲಿ–ಬೆಲ್ಲೆ–ಮಣಿಪುರ ಉಡುಪಿ ರಸ್ತೆಯನ್ನು ಶಾರದ ಕಲ್ಯಾಣ ಮಂಟಪದ ಪಂಚಾಯಿತಿಯಿಂದ ಕೂಡಿಸುವ ಪ್ರವಾಹ ವಿಮೋಚನಾ ಬದಲೀ ರಸ್ತೆಯನ್ನು ಸೂಚಿಸಿದ ವಿಷಯವು ನಿಜವೇ ?

ಆ) ಕಾರ್ಕಳಕ್ಕೆ ತಪ್ಪಿಸಲ್ಪಟ್ಟಿದ್ದ ಬಸ್ ವ್ಯವಸ್ಥೆಯು, ೧೯೮೪–೧೯೮೫ನೇ ಸಾಲಿನ ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಸೇರಿದ್ದ ವಿಷಯವು ನಿಜವೇ ?

ಇ) ೧೯೮೬–೮೭ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಮೇಲ್ಕಂಡ ಕಾಮಗಾರಿಯು ಸೇರದಿರಲು ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು)—

ಅ) ಹೌದು.

ಆ) 'ಅ'ನಲ್ಲಿ ಸೂಚಿಸಿರುವ ಕೆಲಸವು ೮೪–೮೫ರ ಆಯವ್ಯಯ ಪಟ್ಟಿಯಲ್ಲಿ ಸೇರಿತ್ತು.

ಇ) ಸಾಕಷ್ಟು ಹಣ ದೊರಕದೇ ಇರುವುದರಿಂದ.

ಶ್ರೀಮತಿ ಮನೋರಮಾ ಮಧ್ವಾರಾಜ್.—ಉಡುಪಿಯಲ್ಲಿ ಆಗಿಂದಾಗ್ಗೆ ನೆರೆ ಬಂದು ಸಾರ್ವಜನಿಕರಿಗೆ ಆಗುವಂತಹ ತೊಂದರೆಯನ್ನು ತಪ್ಪಿಸುವುದಕ್ಕೋಸ್ಕರ ಬದಲಿ ರಸ್ತೆ ನಿರ್ಮಾಣ ಮಾಡಿ ಬಸ್ ವ್ಯವಸ್ಥೆ ಮಾಡಿಕೊಡುವ ಕಾರ್ಯ ಹೋದ ವರ್ಷವೇ ಆಗಬೇಕಾಗಿತ್ತು. ಅದು ೧೯೮೪–೮೫ನೇ ಸಾಲಿನ ಬಜೆಟ್ಟಿನಲ್ಲೇ ಸೇರಿತ್ತು. ಆದರೆ ಅದನ್ನು ಹಣದ ಅಭಾವದಿಂದ ೧೯೮೫–೮೬ನೇ ಸಾಲಿನ ಬಜೆಟ್ಟಿನಲ್ಲಿ ಕೈಬಿಟ್ಟಿದ್ದೇವೆಂದು ಹೇಳಿದ್ದೀರಿ. ಹಣದ ಅಭಾವ ಯಾವಾಗ ನೀಗುತ್ತದೆ ? ಆ ಕಾಮಗಾರಿಯನ್ನು ಯಾವಾಗ ತೆಗೆದುಕೊಳ್ಳುತ್ತೀರೆಂದು ನಿರ್ದಿಷ್ಟವಾಗಿ ಉತ್ತರಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಹಣದ ಪರಿಸ್ಥಿತಿ ಸುಧಾರಣೆ ಆದಮೇಲೆ ಆದ್ಯತೆ ಕೊಡುತ್ತೇವೆಂದೂ ಹೇಳಿದ್ದೇವೆ; ಆದರೆ ಭವಿಷ್ಯವನ್ನು ಹೇಳಲಾಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಹಣದ ಅಭಾವ ಎಲ್ಲಾ ಕ್ಷೇತ್ರಗಳಲ್ಲೂ ಆಗಿದೆ.

ಅಧ್ಯಕ್ಷರು.—ನೀವು ಏತಕ್ಕೆ ವಕಾಲತ್ತು ವಹಿಸುತ್ತೀರಿ ? ಆದಷ್ಟು ಬೇಗ ಮಾಡುತ್ತಾರೆ.

ಶ್ರೀ ಧರ್ಮಸಿಂಗ್.—ಹಣದ ಅಭಾವ ಯಾವಾಗ ನೀಗುತ್ತದೆಂದು ಮಾನ್ಯ ದೇವೇಗೌಡರಿಂದ ನಾವು ನಿರ್ದಿಷ್ಟವಾಗಿ ಉತ್ತರ ಪಡೆಯಬಯಸುತ್ತೇವೆ. ಎಲ್ಲಾ ಕೆಡೆಯೂ ಹೀಗೆ ಆಗಿದೆ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ ಹೇಳುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಸಂಪನ್ಮೂಲಗಳನ್ನು ರೂಢಿಸುವುದಕ್ಕೆ ಏನೇನು ಸಲಹೆಗಳನ್ನು ಕೊಡುತ್ತಾರೆ ಅವುಗಳನ್ನು ತೆಗೆದುಕೊಂಡು ಸಂಪನ್ಮೂಲಗಳನ್ನು ಹೆಚ್ಚಿಸಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಧರ್ಮಸಿಂಗ್.—ಈ ಹಣದ ಅಭಾವ ಎಲ್ಲ ಕ್ಷೇತ್ರದವರಿಗೂ ಅನ್ವಯವಾಗುತ್ತದೋ ? ಅಥವಾ ನಿರ್ದಿಷ್ಟವಾದ ಕ್ಷೇತ್ರಕ್ಕೆ ಮಾತ್ರ ಅನ್ವಯವಾಗುತ್ತದೋ ?

ಶ್ರೀ ಹೆಚ್. ಡಿ. ದೇವೇಗೌಡ.—ನಿಮಗೆ ಬಜೆಟ್ ಪುಸ್ತಕವನ್ನು ಕೊಟ್ಟಿದ್ದೇವೆ ಅದರಲ್ಲಿ ಏನಾದರೂ ತಾರತಮ್ಯ ಇದ್ದರೆ ಅದನ್ನು ನಮಗೆ ತಿಳಿಸಿದರೆ ನಾವು ತಿದ್ದಿಕೊಳ್ಳುತ್ತೇವೆ.

ಸಿಂಧನೂರು ತಾಲ್ಲೂಕಿನ ಜವಳಗೇರಾ ದಡೆಸೂರು ರಸ್ತೆಯ ಬಗ್ಗೆ

೪೨೫ ಶ್ರೀ ಆರ್. ನಾರಾಯಣಪ್ಪ (ಸಿಂಧನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಸಿಂಧನೂರು ತಾಲ್ಲೂಕಿನ ಜವಳಗೇರಾ ಧಡೆಸೂರು ರಸ್ತೆಯ ಅಲಬನೂರು ಹಳ್ಳದ ಸೇತುವೆ ಕಾರ್ಯವನ್ನು ಆರ್ಧಕ್ಕೆ ನಿಲ್ಲಿಸಲು ಕಾರಣವೇನು, ಹಾಗೂ ಅದನ್ನು ಯಾವಾಗ ಪೂರ್ಣ ಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಸೇತುವೆ ಕೆಲಸವನ್ನು ಗುತ್ತಿಗೆದಾರರ ಗುತ್ತಿಗೆಯನ್ನು ೧೯೮೫ ನೇ ಇಸವಿ ಫೆಬ್ರುವರಿ ಮಾಹೆಯಲ್ಲಿ ರದ್ದು ಮಾಡಲಾಗಿರುತ್ತದೆ. ಉಳಿದ ಕೆಲಸಗಳನ್ನು ಆದಷ್ಟು ಜಾಗ್ರತೆ ಪ್ರಾರಂಭಿಸಿ ಪೂರ್ಣಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕೆ. ಆರ್. ಪೇಟೆ ಸಂತೇಬಾಚಹಳ್ಳಿ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ

೪೩೧ ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೊಕೋಪಯೋಗಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಕೃಷ್ಣರಾಜಪೇಟೆ ಸಂತೇಬಾಚಹಳ್ಳಿ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಪರಿಗಣಿಸಲಾಗಿದೆಯೇ,

ಆ) ಹಾಗಿದ್ದಲ್ಲಿ ಈ ರಸ್ತೆಯ ಅಭಿವೃದ್ಧಿಗೆ ಈ ವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಇ) ಈ ರಸ್ತೆಯನ್ನು ಸಂಪೂರ್ಣ ಡಾಂಬರ್ ರಸ್ತೆಯನ್ನಾಗಿ ಮಾರ್ಪಡಿಸಿ ಈ ರಸ್ತೆಯಲ್ಲಿ ಬರುವ ಕೊಪ್ಪಗಹಳ್ಳಿ ಹಳ್ಳ ಚಿಕ್ಕಸಂದ್ರದ ಹಳ್ಳಗಳಿಗೆ ಸೇತುವೆಗಳನ್ನು ನಿರ್ಮಿಸಿ ಅಭಿವೃದ್ಧಿ ಪಡಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು, ಪರಿಗಣಿಸಲಾಗಿದೆ.

ಆ) ಈ ರಸ್ತೆಯ ಉದ್ದ ೨೪ ಕಿ. ಮೀ. ಇದ್ದು, ಇದರಲ್ಲಿ ೨೦ ಕಿ. ಮೀ. ಉದ್ದಕ್ಕೆ ಡಾಂಬರು ಹಾಕಲಾಗಿದೆ. ಉಳಿದ ಭಾಗವನ್ನು ಹಣದ ಕೊರತೆಯಿಂದ ಡಾಂಬರು ಹಾಕಲಾಗಿಲ್ಲ.

ಇ) ಬಾಕಿ ೪ ಕಿ. ಮೀ. ರಸ್ತೆ ಭಾಗಕ್ಕೆ ಡಾಂಬರ್ ಹಾಕುವುದನ್ನು ಮುಂದು ಕೊಪ್ಪಗಹಳ್ಳಿ ಮತ್ತು ಚಿಕ್ಕಸಂದ್ರದ ಹಳ್ಳಗಳಿಗೆ ಈಗಿರುವ ಕಾಸ್‌ವೇಗಳಿಗೆ ಬದಲು ಸೇತುವೆಗಳನ್ನು ಕಟ್ಟುವುದನ್ನು ಸಾಕಷ್ಟು ಹಣ ದೊರೆತಾಗ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಶ್ರೀ ಕೃಷ್ಣ.—ಇದು ಬಹಳ ಮುಖ್ಯವಾದ ರಸ್ತೆಯಾಗಿದೆ. ಪ್ರವಾಹ ಕಾಲದಲ್ಲಿ ಎರಡು ಹಳ್ಳಿಗಳಲ್ಲಿ ದಿನಗಟ್ಟಲೆ ಬಸ್ಸುಗಳು ನಿಲ್ಲಬೇಕಾಗುತ್ತದೆ. ಆದ್ದರಿಂದ, ಆದಷ್ಟು ಜಾಗ್ರತೆ ಅಲ್ಲಿ ಸೇತುವೆಗಳನ್ನು ಕಲ್ಪಿಸಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸಂಪನ್ಮೂಲಗಳ ಸನ್ನಿವೇಶ ಉತ್ತಮಗೊಂಡಾಗ ಯೋಚಿಸುತ್ತೇವೆ.

ಸಣ್ಣ ನೀರಾವರಿ ಇಲಾಖೆಯಲ್ಲಿ ತಂಬೂಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ, ಭೀಮನ ಕಂಟೆ ಗ್ರಾಮದಲ್ಲಿ ಕೆರೆ ಕಟ್ಟಿಸುವ ವಿಚಾರ

೪೩೩ ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ